

# ಜಲಪಾತಗಳ ಜಿಲ್ಲೆಯಲ್ಲಿ..

ಬ್ರಿಟಿಷ್ ಬಂಗಲೆಯಿಂದ ಕಾಣುವ ಜೋಗ ಜಲಪಾತ

■ ಚಿತ್ರ-ಲೇಖನ

**ಕೃಷ್ಣಿ ಶಿರೂರ**

ಉತ್ತರ ಕನ್ನಡದಲ್ಲಿ ಜಲಪಾತಗಳಿಗೀಗ ವೈಭೋಗ. ಬೇಸಿಗೆಯಲ್ಲಿ ಕೊಂಚ ಒಣಗಿ ಕೊಂಡಂತಿರುವ ಹೆಚ್ಚಿನ ಜಲಪಾತಗಳು ಮುಂಗಾರಿನಲ್ಲಿ ಸಿಂಗಾರಗೊಳ್ಳುತ್ತವೆ. ಒಂದಕ್ಕಿಂತ ಒಂದು ಜಲಪಾತಗಳು ರುದ್ರರಮಣೀಯವಾಗಿ ಪ್ರಪಾತಕ್ಕೆ ಜಿಗಿಯುತ್ತ ಪ್ರವಾಸಿಗರನ್ನು ರೋಮಾಂಚನಗೊಳಿಸುತ್ತಿವೆ. ಶಿರಸಿ, ಸಿದ್ದಾಪುರ, ಯಲ್ಲಾಪುರ ತಾಲ್ಲೂಕುಗಳಲ್ಲಿ ಜಲಪಾತಗಳು ಪ್ರವಾಸಿಗರನ್ನು ಸೆಳೆಯುತ್ತಿದ್ದು, ಶಿರಸಿಯನ್ನು ಕೇಂದ್ರವಾಗಿಟ್ಟುಕೊಂಡಲ್ಲಿ ಈ ಎಲ್ಲ ಜಲಪಾತಗಳ ಸೌಂದರ್ಯ ಸವಿಯಬಹುದು.

**ಶಿವಗಂಗೆಯ ಭೋರ್ಗರೆತ**

ಶಿರಸಿ ತಾಲ್ಲೂಕಿನ ಜಡ್ಡಿಗದ್ದೆ ಸಮೀಪದ ಹಸಿರು ಕಾನನದ ಮಧ್ಯೆ ಧುಮ್ಮಿಕ್ಕುವ ಶಿವಗಂಗಾ ಜಲಪಾತದ್ದು ಭೋರ್ಗರೆಯುವ ಸೆಳೆತ. ಶಿರಸಿ-ಹುಲೇಕಲ್-ವಾನಳ್ಳಿ ಮಾರ್ಗದಲ್ಲಿ 40 ಕಿ.ಮೀ. ದೂರದ ದಟ್ಟಡವಿಯಲ್ಲಿ ಅಡಗಿರುವಂತೆ ಕಲ್ಲುಬಂಡೆಗಳ ಸಂದಿಯಿಂದ 350 ಅಡಿ ಎತ್ತರದಿಂದ ಧುಮುಕಿ ರೋಮಾಂಚನಗೊಳಿಸುವ ಶಾಲ್ಮಲೆ, ಇಲ್ಲಿ ಶಿವನ ಜಟೆಯಿಂದ ಜಿಗಿಯುವ ಗಂಗೆಯಂತೆ ಭಾಸವಾಗುತ್ತಾಳೆ. ಈ ಕಾರಣದಿಂದಲೇ ಈ ಜಲಪಾತಕ್ಕೆ ಶಿವಗಂಗಾ ಫಾಲ್ಸ್ ಎಂಬ ಹೆಸರು ಬಂದಿದೆ.

ರಭಸದ ಮಳೆಯಿಂದ ಬಣ್ಣ ಬದಲಿಸಿಕೊಂಡು ಹರಿಯುವ ಶಾಲ್ಮಲಾ ದಟ್ಟ ಹಸಿರಿನ ಮಧ್ಯೆ ಮಂದಗತಿಯಲ್ಲಿ ಭೋರ್ಗರೆದು ಬೀಳುವ ರಮಣೀಯ ನೋಟ, ರೌದ್ರತೆಯ ಸೊಬಗು ಮರುಳು ಮಾಡುತ್ತದೆ. ಮಳೆಗಾಲದಲ್ಲಿ ಜಲಪಾತವನ್ನು ವೀಕ್ಷಣಾ ಗೋಪುರದಿಂದ ವೀಕ್ಷಿಸುವುದೇ ಉತ್ತಮ. ಕೆಳಗಿಳಿಯುವುದು ಅಪಾಯ. ಇಳಿದರೂ ನೀರಿನೊಳಗೆ ಕಾಲಿಳಿಸುವುದು ತೀರಾ ಅಪಾಯ. ಈಗಾಗಲೇ ನೀರಿನ

(8ನೇ ಪುಟ ನೋಡಿ)



ಅಪ್ಸರಕೊಂಡ ಜಲಪಾತ